**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 101/2019** **CW**-8 **PW**-6

**ಸಾಕ್ಷಿಯನ್ನು ದಿಃ 10.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ದ್ಯಾವೇಗೌಡ |
| ತಂದೆಯ ಹೆಸರುಃ | ನಿಂಗೇಗೌಡ |
| ವಯಸ್ಸುಃ | 58 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಬ್ಯಾಡರಹಳ್ಳಿ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ -1 ರಿಂದ 7 ರವರ ಪರಿಚಯ ಇದೆ. ಆರೋಪಿತರ ಪರಿಚಯವಿದೆ. ಚಾಸಾ-1 ರವರನ್ನು ಗುಂಡಶೆಟ್ಟಿಹಳ್ಳಿ ಗ್ರಾಮದ 1ನೇ ಆರೋಪಿಗೆ ಸುಮಾರು 12 ವರ್ಷದ ಹಿಂದೆ ಮದುವೆ ಮಾಡಲಾಯಿತು. ಮದುವೆ ಸಮಯದಲ್ಲಿ ಚಾಸಾ-1 ರವರ ತಂದೆ ಚಾಸಾ-4 ರವರು ಆರೋಪಿಗಳಿಗೆ ವರದಕ್ಷಿಣೆಯಂತೆ 2 ಲಕ್ಷ ನಗದು ಹಣ ಮತ್ತು 150 ಗ್ರಾಂ ಒಡವೆಯನ್ನು ಕೊಟ್ಟಿರುತ್ತಾರೆ. 1 ವರ್ಷಗಳ ಕಾಲ ಚಾಸಾ-1 ಮತ್ತು 1 ನೇ ಆರೋಪಿ ಚೆನ್ನಾಗಿದ್ದರು. ನಂತರದ ದಿನಗಳಲ್ಲಿ ಆರೋಪಿಗಳು ಹೆಚ್ಚಿನ ವರದಕ್ಷಿಣೆಗಾಗಿ ಕಿರುಕುಳ ನೀಡಿರುತ್ತಾರೆ. ಈ ಸಂಬಂಧ ಮದುವೆಯಾದ 2 ವರ್ಷಗಳ ನಂತರ ನಾನು, ಚಾಸಾ-3, ಚಾಸಾ-2, ಚಾಸಾ-6 ಮತ್ತು ಚಾಸಾ-7 ಹಾಗೂ ಚಾಸಾ-10 ರವರು ಸೇರಿ ನ್ಯಾಯ ಪಂಚಾಯತಿಯನ್ನು ಆರೋಪಿಗಳ ಮನೆಯಲ್ಲಿ ಮಾಡಿರುತ್ತೇವೆ. ಆ ಸಮಯದಲ್ಲಿ 3.5 ಲಕ್ಷ ಹಣವನ್ನು ನೀಡಿ ಹೊಂದಾಣಿಕೆಯಿಂದ ಇರಿ ಎಂದು ಮಾತುಕತೆ ಮಾಡಿರುತ್ತೇವೆ.

ಇದಾದ 2-3 ವರ್ಷಗಳ ಕಾಲ ಅನ್ಯೂನ್ಯವಾಗಿ ಇದ್ದರು. ನಂತರ 2019 ರಲ್ಲಿ ಚಾಸಾ-1 ರವರು ಅರೋಪಿಗಳ ವಿರುದ್ದ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುವ ಬಗ್ಗೆ ತಿಳಿಯಿತು. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಮದುವೆಯಾದ 1 ವರ್ಷದ ನಂತರ 2 ಲಕ್ಷ ಹೆಚ್ಚುವರಿ ವರದಕ್ಷಿಣೆಯನ್ನು ತರುವಂತೆ ಇಲ್ಲವಾದರೆ ಚಾಸಾ-4 ರವರಿಂದ ಆಸ್ತಿ ಬರೆದುಕೊಂಡು ಬರುವಂತೆ ಹೇಳಿದ್ದು, ತರದಿದ್ದರೆ ಸೀಮೆಎಣ್ಣೆ ಹಾಕಿ ಸುಡುವುದಾಗಿ ಚಸಾಸಾ-1 ರವರಿಗೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. 3,50,000/- ಹಣ ನೀಡಿದ ನಂತರ ಆರೋಪಿಗಳು ಹೆಚ್ಚಿನ ವರದಕ್ಷಿಣೆಗಾಗಿ ಚಾಸಾ-1 ರವರಿಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಕೆ ಜೆ ಡಿ ರವರಿಂದ ಃ**

ಮದುವೆ ಸಮಯದಲ್ಲಿ 2 ಲಕ್ಷ ಹಣ ಮತ್ತು 150 ಗ್ರಾಂ ಒಡವೆಗಳನ್ನು ನೀಡುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ಮದುವೆ ಮಾತುಕತೆಗೆ ನಾನು ಸೇರಿರಲಿಲ್ಲ. ನಾವು ರಾಜೀ ಪಂಚಾಯತಿ ಮಾಡಿದ ದಿನಾಂಕ ನೆನಪಿಲ್ಲ. ರೂ. 3,50,000/- ಹಣ ನೀಡುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ. ಪೋಲೀಸರಿಗೆ ನಾನು ನೀಡಿರುವ ಹೇಳಿಕೆಯಲ್ಲಿ ಏನಿಗೆ ಎಂದು ತಿಳಿದುಕೊಂಡಿರಲಿಲ್ಲ. 2 ಲಕ್ಷ ಹಣ ಮತ್ತು ಆಸ್ತಿ ಬರೆಸಿಕೊಂಡು ಬರದಿದ್ದರೆ ಸುಡುತ್ತೇನೆ ಎಂದು ಹೇಳಿದ್ದರು ಎಂದು ಸುಳ್ಳಾಗಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಆರೋಪಿಗಳು ಯಾವುದೇ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಹಳ್ಳಿಯಲ್ಲಿ ಜೀವನ ಮಾಡಲು ಸಾಧ್ಯವಾಗದೇ ಅವರಾಗಿ ಅವರೇ ಮನೆ ಬಿಟ್ಟು

ಬಂದು ತಂದೆಯ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ, ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಚಾಸಾ–1 ಮತ್ತು ಚಾಸಾ–4 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**